88

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್ ಅರುಣ್ ಇವರ ನಿಯಮ 72ರಡಿಯ ಗಮನ ಸೆಳೆಯುವ ಸೂಚನೆಗೆ ಉತ್ತರ:-**

**ಗಮನ ಸೆಳೆಯುವ ಸೂಚನೆ:**

ಕರ್ನಾಟಕ ಪಠ್ಯಪುಸ್ತಕ ಸೊಸೈಟಿಯಿಂದ ಮುದ್ರಿಸಿರುವ ಹತ್ತನೇ ತರಗತಿ ಇಂಗ್ಲೀಷ್ ಮಾಧ್ಯಮದ ಸಮಾಜ ವಿಜ್ಞಾನದ 2024ರ ಪರಿಷ್ಕೃತ ಆವೃತ್ತಿಯ ಭಾಗ-1 ಮತ್ತು ಭಾಗ-2 ರಲ್ಲಿನ ಮುದ್ರಣ ದೋಷ ಹಾಗೂ ತಪ್ಪುಗಳನ್ನು ಸರಿಪಡಿಸುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:-**

**ಸರ್ಕಾರದ ಆದೇಶ ಸಂಖ್ಯೆ: ಇಪಿ 270 ಪಿಎಂಸಿ 2023, ದಿನಾಂಕ:25.09.2023ರ** ಪ್ರಕಾರ ಡಾ|| ಮಂಜುನಾಥ ಜಿ ಹೆಗಡೆ, ನಿವೃತ್ತ ಪ್ರಾಧ್ಯಾಪಕರು, ಉತ್ತರ ಕನ್ನಡ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ 1 ರಿಂದ 10ನೇ ತರಗತಿಯ ಕನ್ನಡ ಪ್ರಥಮ ಹಾಗೂ ದ್ವಿತೀಯ ಭಾಷೆ ಹಾಗೂ 9 ಮತ್ತು 10ನೇ ತರಗತಿಗಳ ಕನ್ನಡ ತೃತೀಯ ಭಾಷೆ ಮತ್ತು 6 ರಿಂದ 10ನೇ ತರಗತಿಗಳ ಸಮಾಜ ವಿಜ್ಞಾನ ವಿಷಯದ ಪಠ್ಯಪುಸ್ತಕಗಳನ್ನು 07 ಮಾಧ್ಯಮಗಳಲ್ಲಿ ಪರಿಷ್ಕರಿಸಲು ಸಮಿತಿಯನ್ನು ರಚಿಸಲಾಗಿತ್ತು. ಅದರಂತೆ, ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಂದ ಪಠ್ಯಪುಸ್ತಕ ಪರಿಷ್ಕರಣಾ ಕಾರ್ಯವನ್ನು ನಿರ್ವಹಿಸಲಾಗಿರುತ್ತದೆ.

10ನೇ ತರಗತಿಯ ಆಂಗ್ಲ ಮಾಧ್ಯಮದ ಸಮಾಜ ವಿಜ್ಞಾನದ 2024ರ ಪರಿಷ್ಕೃತ ಆವೃತ್ತಿಯ ಭಾಗ-01 ಮತ್ತು ಭಾಗ-02ರ ಪಠ್ಯಪುಸ್ತಕಗಳನ್ನು ಶಾಲಾ ಹಂತಕ್ಕೆ ವಿತರಿಸಿದ ಸಂದರ್ಭದಲ್ಲಿ ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ ಬಂದಿರುವ ಕೆಲವು ಆಕ್ಷೇಪಣೆಗಳನ್ನು, ತಿದ್ದುಪಡಿಗಳನ್ನು ಹಾಗೂ ಮುದ್ರಣ ದೋಷಗಳನ್ನು ಸಮಿತಿಯ ಗಮನಕ್ಕೆ ತಂದು 2025-26ನೇ ಸಾಲಿನ ಪಠ್ಯಪುಸ್ತಕಗಳಲ್ಲಿ ಸರಿಪಡಿಸಲಾಗಿರುತ್ತದೆ.

2025-26ನೇ ಸಾಲಿನ ಪಠ್ಯಪುಸ್ತಕಗಳು ಮುದ್ರಣಗೊಂಡು ಸರಬರಾಜಾದ ನಂತರ ಬಂದಿರುವ ಆಕ್ಷೇಪಣೆಗಳನ್ನು ಸಮಿತಿಯ ಮುಂದೆ ಮಂಡಿಸಿ ಅಭಿಪ್ರಾಯವನ್ನು ಪಡೆದು ಮುಂದಿನ ದಿನಗಳಲ್ಲಿ ಇತ್ಯರ್ಥಪಡಿಸುವ ಬಗ್ಗೆ ಕ್ರಮವಹಿಸಲಾಗುವುದು.

**ಇಪಿ 314 ಪಿಎಂಸಿ 2025**

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು